**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 209–15**

| | | |
|---|---|---|
| ಹೆಸರು | ಜಿ.ಬಿ ಸುಧೀರ್ | ಪ್ರಾ.ಸಾ.8 |
| ತಂದೆ ಹೆಸರು | ಹೆಚ್ ಜಿ ಭೂಪಾಲ್ | ಚಾ.ಸಾ.17 |
| ವಯಸ್ಸು | 51 ವರ್ಷ | |
| ಕೆಲಸ | ಹಿರಿಯ ಮೋಟಾರ್ ವಾಹನ ನಿರೀಕ್ಷಕರು, ಆರ್.ಟಿಓ | ಸಾ.ಪ್ರ.ವ.ಬೋ |
| ಹಾಲಿ ವಾಸ | ಕೆಆರ್ ಪುರಂ | ದಿ:–10.01.2020 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಃ–**

ನಾನು 2012 ರಿಂದ 2018ರವರೆಗೆ ಆರ್‌ಟಿಓ ಕೆಆರ್.ಪುರಂನಲ್ಲಿ ಹಿರಿಯ ಮೋಟಾರ್ ವಾಹನ ನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ30.10.2013ರಂದು ಹೊಸಕೋಟೆ ಪೋಲೀಸ್ ಠಾಣೆಯವರ ಕೋರಿಕೆ ಮೇರೆಗೆ ಅದೇ ದಿನ ಅಪಘಾತದ ಹಿನ್ನಲೆಯಲ್ಲಿ ಕೆಎ–01–ಎಫ್–1621 ಭಾರಿ ಪ್ರಯಾಣಿಕರ ವಾಹನ ಮತ್ತು ಕೆಎ–53–ವೈ–7065 ಮೋಟಾರ್ ಸೈಕಲ್‌ನ್ನು ಪರಿಶೀಲಿಸಲಾಗಿ ಅವುಗಳ ಜಖಂಗಳನ್ನು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. 2 ವಾಹನಗಳನ್ನು ಸ್ಥಳದಲ್ಲಿ ಪರಿಶೀಲಿಸಲಾಗಿ, ವಾಹನಗಳ ತಡೆಗಳು ಸುಸ್ಥಿತಿಯಲ್ಲಿದ್ದವು. ನನ್ನ ಅಭಿಪ್ರಾಯದಲ್ಲಿ ಈ ಅಪಘಾತವು ವಾಹನಗಳ ಯಾವುದೇ ಯಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಆ ಕುರಿತು ನಾನು ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ9 ಎಂದು, ಸಾಕ್ಷಿಯ ಸಹಿಯನ್ನು ನಿಪಿ.9ಎ ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:–**

ಮೋಟಾರ್ ಸೈಕಲ್ ಡಿವೈಡರ್‌ಗೆ ಹೊಡೆದಾಗ ಕೂಡಾ ನಾನು ಹೇಳಿದಂತಹ ಜಖಂಗಳು ಮೋಟಾರ್ ಸೈಕಲ್‌ಗೆ ಸಂಭವಿಸುವ ಸಾಧ್ಯತೆ ಇದೆ ಎಂದರೆ ಸರಿ. ಬಸ್‌ನ ಮೇಲೆ ಹಳೆಯ ಜಖಂಗಳ ಕುರಿತು ನಾನು ಗಮನಿಸಿಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಹೊಸಕೋಟೆ.**